ನಾಯಕ ಲೇಖಕರ ಸಮಾವೇಶದಲ್ಲಿ ಭಾಗವಹಿಸಲು ಗೆಳೆಯರೊಂದಿಗೆ ಅಲ್ಲಿಗೆ ಹೋಗಿದ್ದಾನೆ. ಅವನ ಗೆಳೆಯರು ಆಸ್ತಿಕರು, ಈತ ನಾಸ್ತಿಕ. ಕಥಾನಾಯಕನಿಗೆ ಬುದ್ಧನ ತತ್ವಗಳ ಮೇಲೆ ಮಾತ್ರ ನಂಬಿಕೆ. ಗೆಳೆಯರು ತಮ್ಮ ತಮ್ಮ ಧಾರ್ಮಿಕ ಆಚರಣೆಗಳಲ್ಲಿ ಮುಳುಗಿದ್ದರೆ, ಈತ ಅಲ್ಲಿ ರಿಕ್ಷಾ ತುಳಿಯುವ ಕಾರ್ಮಿಕನ ಜೀವನದ ಕಥೆ ಆಲಿಸುತ್ತಿದ್ದಾನೆ. ಆ ಕಾರ್ಮಿಕನ ಜೀವನಾನುಭವವೇ ಕಥೆಯಾಗಿ ನಿರೂಪಣೆಗೊಂಡಿದೆ. ಅಲ್ಲಿನ ಶ್ರೀಮಂತ ಸಮುದಾಯವಾದ ಠಾಕೂರರ ದಬ್ಬಾಳಿಕೆಯ ಚಿತ್ರಗಳಿಗೆ ಈ ಕಥೆಯಲ್ಲಿ ಅವಕಾಶವಾಗಿದೆ. ಇನ್ನೊಂದು ಕಥೆ 'ಕುರುಬುರ ಕಣ್ಣೆಮ್ಮ', ಊರಗೌಡನ ಶೋಷಣೆಯನ್ನು ಮಂಡಿಸುತ್ತದೆ. ಅವನ ಆಳಾಗಿ ದುಡಿಯುವ ಕಣ್ಣೆಮ್ಮ ಎಲ್ಲಾ ರೀತಿಯ ಸಂಕಟಗಳಿಗೆ ತುತ್ತಾದವಳು. ಮಾದರ ಹುಡುಗನೊಬ್ಬ ಅವಳನ್ನು ರಕ್ಷಿಸಲು ಹೋರಾಟ ಕೈಗೊಂಡಿದ್ದಾನೆ. ಆತ ದಲಿತ ಸಂಘರ್ಷ ಸಮಿತಿಯ ಸಂಪರ್ಕಕ್ಕೆ ಬಂದಂಥ ಹುಡುಗ. ಕಲಿತ ಹುಡುಗರು ಊರಿನ ಫ್ಯೂಡಲ್ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳುವ ಹಲವಾರು ಕಥೆಗಳನ್ನು ವಾಲೀಕಾರರು ರಚಿಸಿದ್ದಾರೆ. 'ಕರುಳಿನ ತೆಪ್ಪದ ಮೇಲೆ' ಕಥೆ ಇದಕ್ಕೆ ನಿದರ್ಶನ. 'ಒಂದು ಹೆಣ್ಣಿನ ಒಳಜಗತ್ತು' ಕಾದಂಬರಿ, ರತ್ನ ಎಂಬ ಹೆಣ್ಣುಮಗಳ ಜೀವನದ ಏರಿಳಿತಗಳನ್ನು ಹೇಳಿದೆ. ಗಂಡನ ಕೊಲೆ ಮತ್ತು ನಂತರದ ವಿದ್ಯಾಮಾನಗಳು ಇದರಲ್ಲಿವೆ. ಆ ಕಾಲದಲ್ಲಿ ಹೆಚ್ಚು ಚರ್ಚೆಗೊಳಗಾದ ಅವರ ಕಾದಂಬರಿಯೆಂದರೆ 'ಬೆಳ್ಯ'. ಇದರ ಭಾಷೆ, ದೀರ್ಘ ಸಮಾಸಯುಕ್ತ ಪದಗಳು, ಅಧೋಲೋಕದ ಕನಸುಗಳು ಓದುಗರ ಅಚ್ಚರಿಗೆ ಕಾರಣವಾದವು. ಬೆಳ್ಯನ ಮುಗ್ಧತೆ, ಅಸಹಾಯಕತೆ, ಜೀವನೋತ್ಸಾಹ ಕನ್ನಡದಲ್ಲಿ ಹೊಸದೊಂದು ಪಾತ್ರವನ್ನು ಕಾಣಿಸಿತು. ತನ್ನ ಹೆಂಡತಿಯನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಬೆಳ್ಯ ಆಕೆಯ ಇನ್ನೊಂದು ಗುಪ್ತ ಪ್ರೇಮವನ್ನು ಒಪ್ಪಿಕೊಳ್ಳಲೂ ಆಗದೆ, ವಿರೋಧಿಸಲೂ ಆಗದೆ ಒದ್ದಾಡುವನು. ಈ ಒದ್ದಾಟವನ್ನು ವಾಲೀಕಾರರು ಸೂಕ್ಷ್ಮವಾಗಿ ನಿರೂಪಿಸಿದ್ದಾರೆ. ಆತ ಮೌನಿಯಾಗಿ ಜೀವನ ದೂಡುತ್ತಾನೆ. ಈ ಮೌನ ಎಲ್ಲಾ ತರಹದ ಚೀರಾಟಗಳಿಗಿಂತ ಹರಿತವಾಗಿತ್ತು. ಆದರೆ ಕಾದಂಬರಿ ಪಡೆಯಬೇಕಾದಷ್ಟು ಚರ್ಚೆಯನ್ನು ಪಡೆಯದೇ ಹೋಯಿತು. ಇದನ್ನು ಅನಗತ್ಯವಾಗಿ 'ಕುಸುಮಬಾಲೆ'ಯ ಜೊತೆ ಇಟ್ಟು ಓದಲಾಯಿತು. 'ಟೊಂಕದ ಕೆಳಗಿನ ಜನ', 'ಅಗ್ನಿರಾಜ' ಮತ್ತು 'ಜೋಗತಿ' ಅವರು ಬರೆದ ನಾಟಕಗಳು. ಇನ್ನೂ ಕೆಲ ನಾಟಕಗಳನ್ನು ವಾಲೀಕಾರರು ಬರೆದಿದ್ದಾರೆ. ವೇಶ್ಯೆಯರ ಬದುಕು, ವಡ್ಡಾರಾಧನೆಯಲ್ಲಿನ ಕಾರ್ತಿಕ ಋಷಿ ಕಥೆಯಲ್ಲಿ ಬರುವ ಅಗ್ನಿರಾಜನಿಗೆ ಸಂಬಂಧಿಸಿದ ಘಟನೆ ಮತ್ತು ದೇವದಾಸಿ ಜೀವನದ ತೊಡಕುಗಳು ಇಲ್ಲಿನ ನಾಟಕಗಳಲ್ಲಿವೆ. ಜಾನಪದದ ಕೆಲ ತಂತ್ರಗಳನ್ನು ವಾಲೀಕಾರರು ಬಳಸಿ ಅದಕ್ಕೆ ಬಂಡಾಯದ ಸ್ಪರ್ಶ ನೀಡಿದರು. ಆದರೆ ನಾಟಕ ಪ್ರಕಾರದಲ್ಲಿ ಹೇಳಿಕೊಳ್ಳುವಂಥ ಸಾಧನೆ ಅವರಿಗೆ ಸಾಧ್ಯವಾಗಲಿಲ್ಲ.

ವಾಲೀಕಾರರಿಗೆ ಜಾನಪದದ ಬಗೆಗೆ ಅಪಾರವಾದ ತಿಳಿವಳಿಕೆಯಿತ್ತು. ಈ ಕುರಿತು ಸಾವಿರಾರು ಪುಟ ಬರೆದಿದ್ದಾರೆ. ಅವರದು ಸೃಜನಶೀಲ ಮನಸ್ಸೇ ಹೊರತು ಸೈದ್ಧಾಂತಿಕವಾಗಿ ಪರಿಕಲ್ಪಿಸಿಕೊಳ್ಳುವ ಮನಸ್ಸಲ್ಲ. ಹೀಗಾಗಿ ಇಲ್ಲಿನ ಲೇಖನಗಳಲ್ಲಿ ಸಂಗ್ರಹಗುಣ, ಮಾಹಿತಿ ಪ್ರಧಾನತೆ ಜೊತೆಗೆ ಕೆಲ ವಿಶೇಷವಾದ ಒಳನೋಟಗಳಿವೆ. ಜಾತ್ರೆಗಳ ಕುರಿತು ಇರುವ ಪುರಾಣಕಾಲದ ನಂಬಿಕೆಗಳು, ಜನಪದ ಕಲಾವಿದರ ಜೀವನ ಚಿತ್ರಗಳು, ಕಡ್ಲಿಮಟ್ಟಿ ಕಾಶೀಬಾಯಿ ಕಥೆ ಹುಟ್ಟಿಕೊಂಡ ರೀತಿ ಮತ್ತು ದೇವದಾಸಿಯರ ಜೀವನದ ಸುಧಾರಣೆಗೆ ಕೈಗೊಳ್ಳಬೇಕಾದ ಕ್ರಮಗಳು – ಇಂಥ ನೂರಾರು ತಿಳಿವಳಿಕೆಗಳನ್ನು ವಾಲೀಕಾರರು ದಾಖಲಿಸಿದ್ದಾರೆ. ಅವರದೊಂದು ಪ್ರವಾಸ ಕಥನವೂ ಇದೆ. 'ಮಹಾರಾಷ್ಟ್ರ ರಾಜ್ಯದ ತುಂಬಾ ಹರಿಯುತ್ತಿರುವ ವೇಶ್ಯಾ ಸಹೋದರಿಯರ ಕಣ್ಣೀರ ಕಡಲಿನ ಕೋಗಿಲೆ ಗಾನ' ಎಂಬುದು ಅದರ ತಲೆಬರಹ. ಇದು ಕನ್ನಡ ಸಾಹಿತ್ಯ ಲೋಕದ ಚರಿತ್ರೆಯಲ್ಲಿ ಅತಿ ಉದ್ದನೆಯ ಶೀರ್ಷಿಕೆ ಎಂದು ಚಿದಾನಂದ ಸಾಲಿ ಬರೆದಿದ್ದರು. ಇಂದಿಗೂ ಈ ದಾಖಲೆ ವಾಲೀಕಾರರ ಹೆಸರಿನಲ್ಲೇ ಇದೆ. ಮುಂಬೈ ತಿರುಗಾಟದ ಕಥನವಿದು. ಅನೇಕ ದಲಿತ ಹೋರಾಟಗಾರರು, ಕವಿಗಳು ಮತ್ತು ಪತ್ರಕರ್ತರನ್ನು ವಾಲೀಕಾರರು ಭೇಟಿಯಾಗಿ ಅಲ್ಲಿನ ಅನುಭವಗಳನ್ನು ದಾಖಲಿಸಿದ್ದಾರೆ. ಮುಂಬೈಯಲ್ಲಿ ಅಮಿತಾಭ್ ಬಚ್ಚನ್‌ರನ್ನು ನೋಡುವುದು ಅವರ ಆಸೆ. ಇದಕ್ಕಾಗಿ ಬಚ್ಚನ್ ಎಲ್ಲಿರುವರೆಂಬುದನ್ನು ಪತ್ತೆ ಹಚ್ಚುತ್ತಾರೆ. ಫಿಲ್ಮಿಸ್ತಾನ್‌ನಲ್ಲಿ ಒಂದು ಶೂಟಿಂಗ್